(159)

ತೆರಿಗೆ ವಿಧಿಸುವಿಕೆ, ಹಣಕಾಸು ಹಾಗೂ ಅಪೀಲು ಸ್ಥಾಯಿ ಸಮಿತಿ ಹಾಗೂ ವಾರ್ಡ್ ಮಟ್ಟದ ಲೋಕೋಪಯೋಗಿ ಕಾಮಗಾರಿ, ನಗರ ಯೋಜನೆ ಹಾಗೂ ಮೂಲಸೌಕರ್ಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರವನ್ನು ಚಲಾಯಿಸಿ ಆಡಳಿತಗಾರರ ದಿನಾಂಕ: 19-03-2022ರ ನಡವಳಿಗಳು

ವಿಷಯದ ಸಂಖ್ಯೆ: 210/2022-23

ಪ್ರಸ್ತಾವನೆ :

ಟಿಪ್ಪಣಿಯಲ್ಲಿ ವಿವರಿಸಿರುವಂತೆ, 2021-22ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ ಪಿ-2415 (Reserve Fund for T & F Committee) ಅಡಿಯಲ್ಲಿ Providing and installation of decorative Tusker street Light poles and lights from Tirumala Daba to MS playa Circle in Ward No:03 ಅಂದಾಜು ಮೊತ್ತ ರೂ:250.00 ಲಕ್ಷಗಳಿಗೆ ನೀಡಲಾಗಿರುತ್ತದೆ. ಸದರಿ ಕಾಮಗಾರಿಗಳನ್ನು ಕೈಗೊಳ್ಳಲು ಅಂದಾಜು ಪಟ್ಟಿಯನ್ನು ಲೋಕೋಪಯೋಗಿ ಇಲಾಖೆಯ 2021-22ನೇ ಸಾಲಿನ ದರಪಟ್ಟಿ ಮತ್ತು 2021-22ನೇ ಸಾಲಿನ ವಿದ್ಯುತ್ ದರಪಟ್ಟಿ ಹಾಗೂ ಅನುಮೋದಿತ ದರಗಳನ್ನು ಅಳವಡಿಸಿಕೊಂಡು ಅಂದಾಜು ಪಟ್ಟಿ ತಯಾರಿಸಲಾಗಿದೆ.

ಸದರಿ ಕಾಮಗಾರಿಯನ್ನು ಸೇವಾ ಹಿತದೃಷ್ಟಿಯಿಂದ ತುರ್ತಾಗಿ ಕೈಗೊಳ್ಳಬೇಕಾಗಿದ್ದರಿಂದ ಸಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕ ಮಂಜೂರಾತಿಯನ್ನು ನಿರೀಕ್ಷಿಸಿ ಕಾರ್ಯಪಾಲಕ ಅಭಿಯಂತರರು ಯೋಜನಾ ವಿಭಾಗರವರು ದಿನಾಂಕ:30-05-2022ರಂದು ಟೆಂಡರ್ ಆಹ್ವಾನಿಸಲಾಗಿತ್ತು.

ತಾಂತ್ರಿಕ ಬಿಡ್‌ನ್ನು ದಿನಾಂಕ:15-06-2022 ರಂದು ತೆರೆಯಲಾಗಿದ್ದು, ಟೆಂಡರ್ ಪ್ರಕ್ರಿಯೆಯಲ್ಲಿ ಇಬ್ಬರು ಬಿಡ್‌ದಾರರಾದ Sri.A.N.Madhusudhan (Suraksha Electrical) ಮತ್ತು Sri.D.Shivanna (Sri.Nanjundeshwara Electricals) ರವರು ಭಾಗವಹಿಸಿದ್ದು, ಇಬ್ಬರು ಬಿಡ್‌ದಾರರ ಆರ್ಥಿಕ ಬಿಡ್ ತೆರೆಯಲು ಮುಖ್ಯ ಅಭಿಯಂತರರು ಯಲಹಂಕ ವಲಯರವರು ಅನುಮೋದಿಸಿರುವಂತೆ ದಿನಾಂಕ:30-06-2022 ರಂದು ಆರ್ಥಿಕ ಬಿಡ್‌ನ್ನು ತೆರೆಯಲಾಗಿದ್ದು, ವಿವರ ಕೆಳಕಂಡಂತೆ ಇರುತ್ತದೆ.

ಕ್ರ ಸಂ	ಗುತ್ತಿಗೆದಾರರ ಹೆಸರು	ಟೆಂಡರ್‌ಗಿಟ್ಟ ಮೊತ್ತ ರೂ ಗಳಲ್ಲಿ (2021-22ನೇ ಸಾಲಿನ ದರಪಟ್ಟಿಯಂತೆ ಮಂಜೂರಾತಿ ದರ)	ಗುತ್ತಿಗೆದಾರರು ನಮೂದಿಸಿದ ಮೊತ್ತ (ರೂ ಗಳಲ್ಲಿ	ಗುತ್ತಿಗೆದಾರರು ನಮೂದಿಸಿದ ಮೊತ್ತಕ್ಕೆ ಹೋಲಿಸಿದಾಗ ಕೇಳಬಹುದಾದ ಪ್ರೀಮಿಯಂ	ಪದಾ
1	Sri.A.N.Madhusudhan(Suraksha Electrical)	2,21,70,997.81	2,32,77,829.69	4.99% ಹೆಚ್ಚು	ಎಲ್-1
2	Sri. D Shivanna Sri.Nanjundeshwara Electricals)		2,36,11,575.70	6.50% ಹೆಚ್ಚು	ಎಲ್-2

(12)

ಮಾನ್ಯ ಮುಖ್ಯ ಆಯುಕ್ತರು ರವರು ಟೆಂಡರ್ ಪ್ರಿಮಿಯಂಯನ್ನು ಶೇಕಡ:3.50% ಕ್ಕೆ ಮಿತಿಗೊಳಿಸಿದ್ದು, ಅದರಂತೆ ಗುತ್ತಿಗೆದಾರರಿಗೆ ದರ ಸಂಧಾನ ನಡೆಸಿದ್ದು, ಅದಕ್ಕೆ ಗುತ್ತಿಗೆದಾರರು ಶೇಕಡ:3.50%ರ ಟೆಂಡರ್ ಪ್ರಿಮಿಯಂಗೆ ಕಾಮಗಾರಿಯನ್ನು ನಿರ್ವಹಿಸಲು ಒಪ್ಪಿರುತ್ತಾರೆ. ವಿವರ ಈ ಕೆಳಕಂಡಂತಿರುತ್ತದೆ.

ಕ್ರ ಸಂ	ಬಿಡ್‌ದಾರರ ಹೆಸರು	2021-22ನೇ ಸಾಲಿನ ದರ ಪಟ್ಟಿಯಂತೆ ಟೆಂಡರ್ ಗಿಟ್ಟ ಮೊತ್ತ	ಗುತ್ತಿಗೆದಾರರು ನಮೂದಿಸಿದ ಮೊತ್ತ ರೂ:	ಶೇಕಡ ವಾರು	ಗುತ್ತಿಗೆದಾರರು ನೀಡಿರುವ ದರ ಸಂಧಾನ ಮೊತ್ತ	ಶೇಕಡ ವಾರು
1	Sri.A N MADHU SUDHAN SURAKSHA ELECTRICALS)	ರೂ.2,21,70,997.81	2,31,84,718.37	4.57% ಹೆಚ್ಚು	ರೂ.2,29,47,284.51	3.50% ಹೆಚ್ಚು

ಈ ಕೆಳಕಂಡ ಷರತ್ತುಗಳಿಗೆ ಒಳಪಡಿಸಿದೆ.

1. ಪ್ರಸ್ತಾಪಿತ ಕಾಮಗಾರಿಗಳ ಸ್ಥಳ ಪರಿವೀಕ್ಷಣೆ ಮಾಡಿ ಕಾಮಗಾರಿಯ ಅವಶ್ಯಕತೆ ಬಗ್ಗೆ ಹಾಗೂ ಸದರಿ ಕಾಮಗಾರಿಯನ್ನು ಪಾಲಿಕೆಯ ಹಿಂದಿನ ಆಯವ್ಯಯಗಳಲ್ಲಿ/ ಅನುದಾನಗಳಲ್ಲಿ ಕೈಗೊಂಡಿಲ್ಲದೆ ಇರುವ ಮತ್ತು ಪುನಾರಾವರ್ತನೆಯಾಗದೇ ಇರುವುದನ್ನು ಖಚಿತ ಪಡಿಸಿಕೊಳ್ಳುವುದು.
2. ಕಾಮಗಾರಿಯನ್ನು ಅನುಷ್ಠಾನಗೊಳಿಸುವ ಪೂರ್ವದಲ್ಲಿ ಆಯುಕ್ತರವರ ಕಛೇರಿ ಆದೇಶ ಸಂಖ್ಯೆ:ಮುಲೆಅ/ಆಯವ್ಯ/2019-20/ಟಿಆರ್/11/2018-19 ದಿನಾಂಕ:12-06-2019 ಮತ್ತು ಆಯುಕ್ತರವರ ಅಂತರಿಕ ಕಛೇರಿ ಟಿಪ್ಪಣಿ ಸಂಖ್ಯೆ:ಬಿಬಿಎಂಪಿ/ಆ/ಟಿ.ಆರ್/5287/2019-20, ದಿನಾಂಕ:05-11-2019 ಮತ್ತು ಬಿಬಿಎಂಪಿ/ಪ/ಟಿಆರ್/6166/2019-20, ದಿನಾಂಕ:13-12-2019 ರಲ್ಲಿನ ನಿರ್ದೇಶನಗಳನ್ನು/ಪ್ರಕ್ರಿಯೆಗಳನ್ನು ಅನುಸರಿಸತಕ್ಕದ್ದು.
3. ಕಾಮಗಾರಿಗೂ ಮುನ್ನ ಹಾಗೂ ನಂತರದ ಜಿಪಿಎಸ್‌ಯುಳ್ಳ ಭಾಯಾ ಚಿತ್ರಗಳನ್ನು ಸಲ್ಲಿಸತಕ್ಕದ್ದು.

ಈ ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಕಾಮಗಾರಿಯ ಅಂದಾಜು ಮೊತ್ತ ರೂ:250.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ನಿರೀಕ್ಷಿಸಿ ಟೆಂಡರ್ ಆಹ್ವಾನಿಸಲಾಗಿರುವುದರಿಂದ ಘಟನೋತ್ತರ ಆಡಳಿತಾತ್ಮಕ ಅನುಮೋದನೆ ಹಾಗೂ ಸದರಿ ಕಾಮಗಾರಿಯನ್ನು ಸಾರ್ವಜನಿಕರ ಸೇವಾ ಹಿತದೃಷ್ಟಿಯಿಂದ ತುರ್ತಾಗಿ ಕೈಗೊಳ್ಳಬೇಕಾಗಿರುವುದರಿಂದ ಗುತ್ತಿಗೆದಾರರಾದ Sri.A.N.MADHUSUDHAN (SURAKSHA ELECTRICALS) ರವರು ದರ ಸಂಧಾನಿತ ಮೊತ್ತವಾದ ರೂ. 2,29,47,284.51ಗಳಿಗೆ ಟೆಂಡರ್ ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ:3.50% ರಷ್ಟು ಅಧಿಕ ಟೆಂಡರ್ ಪ್ರಿಮಿಯಂಗೆ (2021-22ನೇ ಸಾಲಿನ ದರಪಟ್ಟಿ) ಅನುಮೋದನೆ ಕೋರುತ್ತಾ, ತೆರಿಗೆ ವಿಧಿಸುವಿಕೆ ಮತ್ತು ಹಣಕಾಸು ಹಾಗೂ ಅಪೀಲು ಸ್ಥಾಯಿ ಸಮಿತಿ ಹಾಗೂ ವಾರ್ಡ್ ಮಟ್ಟದ ಲೋಕೋಪಯೋಗಿ ಕಾಮಗಾರಿ, ನಗರ ಯೋಜನೆ ಹಾಗೂ ಮೂಲಸೌಕರ್ಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರವನ್ನು ಚಲಾಯಿಸಿ ತೀರ್ಮಾನಕ್ಕಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ವಲಯ ಆಯುಕ್ತರು (ಯಲಹಂಕ) ರವರ ದಿನಾಂಕ:17-08-2022ರ ಟಿಪ್ಪಣಿ.

ತೀರ್ಮಾನ: ವಲಯ ಆಯುಕ್ತರು (ಯಲಹಂಕ)ರವರ ದಿನಾಂಕ:17-08-2022ರ ಟಿಪ್ಪಣಿಯನ್ನು ಒಪ್ಪಿದೆ.

(ರಾಕೇಶ್ ಸಿಂಗ್)
ಆಡಳಿತಗಾರರು